Business Standard -04.08.2022

# Karnataka Bank Ltd.

**Your Family Bank. Across India.**

Regd. & Head Office : Post Box No.599, Mahaveera Circle, Kankanady, Mangaluru – 575 002
CIN : L85110KA1924PLC001128, E-Mail : investor.grievance@ktkbank.com
Website: www.karnatakabank.com, Phone : 0824-2228222

## NOTICE OF 98th ANNUAL GENERAL MEETING AND E-VOTING

Notice is hereby given that the 98th Annual General Meeting (e-AGM) of the Bank is scheduled to be held on **Friday, August 26, 2022 at 11.30 AM IST** through Video Conferencing(VC)/Other Audio Visual means (OAVM) to transact the items of business set out in the Notice of the 98th e-AGM, in compliance with the applicable provisions of the Companies Act, 2013 and the Rules made thereunder and the SEBI (LODR) Regulations, 2015, read with General Circular No. 02/2022 dated 05.05.2022 and other relevant Circulars issued by the Ministry of Corporate Affairs (MCA) and SEBI in the matter.

Accordingly, the Members can participate in the e-AGM through VC/OAVM facility for which necessary instructions are provided in the Notice of e-AGM. The members participating through VC/OAVM facility shall only be reckoned for the purpose of quorum under Section 103 of the Companies Act, 2013.

In compliance with the aforesaid circulars, the Notice of the e-AGM and the Annual Report for FY 2021-22 along with the report of the Auditors' and the Directors' thereon and other documents required to be attached thereto have been hosted on our Bank's website and the weblink has been disseminated through email on August 02, 2022 to the members of the Bank whose email addresses are registered with the Bank/Depository Participants.

The Notice and the Annual Report can also be accessed from the Bank's website at https://karnatakabank.com/investor-portal/annual-report and on the website of Stock Exchanges i.e., BSE Limited and National Stock Exchange of India Limited at www.bseindia.com and www.nseindia.com, respectively, as well as on www.evotingindia.com.

The items of business set out in the Notice of e-AGM will be transacted through voting by electronic means and accordingly, the Bank is providing its members remote e-voting facility in compliance with the Section 108 the Companies Act, 2013 read with Rule 20 of the aforesaid Rules and Regulation 44 of SEBI (LODR) Regulations, 2015 and SS-2 issued by ICSI. The remote e-voting schedule is as under:

| | | |
|---|---|---|
| 1. | Date and time of commencement of remote e-voting | **August 22, 2022 (9.00 a.m. IST)** |
| 2. | Date and time of end of remote e-voting | **August 25, 2022 (5.00 p.m. IST)** |
| 3. | Details of website | **www.evotingindia.com/https://eservices.nsdl.com** |
| 4. | Cut-Off Date for determination of eligibility to vote through remote e-voting or e-voting during the e-AGM | **August 19, 2022** |

Further,

1. A person whose name is recorded in the register of members or in the register of beneficial owners, as the case may be, as on Cut-off date **(i.e., August 19, 2022)** only shall be entitled to vote by electronic means or during the e-AGM.
2. The remote e-voting is open for all the members holding shares in physical or dematerialized form.
3. The remote e-voting **shall be disabled at 5.00 PM IST on August 25, 2022** and shall not be allowed beyond this date and time.
4. The members attending the e-AGM and who have not cast their vote(s) through remote e-voting will be allowed to vote during the e-AGM.
5. Even after exercising the right to vote through remote e-voting, a member may participate in the e-AGM but shall not be eligible to vote again at the e-AGM.
6. Any person, who acquires shares of the Bank and becomes a member after dissemination of the Notice and holding shares as on the cut-off date i.e., **August 19, 2022,** may write to Bank's Registrar and Share Transfer Agent (RTA) at irg@integratedindia.in in case of any login related issues. However, users who have already registered with CDSL/NSDL for remote e-voting can use their existing user ID and password for casting the vote and also for attending the e-AGM electronically.
7. Detailed instructions on the procedure to be followed for remote e-voting, participating in the e-AGM and for voting during the e-AGM have been provided in the Notice of e-AGM for the information and guidance of the members.
8. **TDS on Dividend:** The Board of Directors has recommended a dividend of ₹ 4 per share for the FY 2021-22, subject to approval of the members at the ensuing e-AGM and the record date for the purpose is fixed as **August 19, 2022.** As per the provisions of Income Tax Act, 1961 amended by Finance Act 2020, the Bank is required to deduct tax at source (TDS) on the dividend paid to the shareholders at the prescribed rates and instructions in this connection are provided in the Notice of AGM which are also hosted at https://karnatakabank.com/investor-portal/annual-report. The eligible shareholders claiming exemption from TDS/deduction at lower rates etc., are required to upload the necessary documents/declaration etc., on the weblink https://www.integratedindia.in/ExemptionFormSubmission.aspx on or before **August 21, 2022 @ 11.59PM IST.** No communication on the tax determination/deduction received through any other mode or after the aforesaid date and time will be considered.
9. **Manner of registration of email id and mobile numbers/updation of KYC/Bank Account particulars :**

| | |
|---|---|
| **Physical Shareholding** | Pursuant to the SEBI Circular SEBI/HO/ MIRSD/MIRSD_RTAMB/P/CIR/2021/655 dated November 3, 2021, the shareholders holding shares in physical form are mandatorily required to furnish PAN, KYC and Nomination details to the Bank/RTA. This will also help the Bank in crediting the dividend amount electronically. To update these particulars in a common service request, the following documents shall be submitted to the Bank/RTA:<br>1. Form ISR-1, ISR2, SH-13 (Nomination Form);<br>2. Self-attested copy of PAN Card;<br>3. Copy of the Cheque leaf of the Bank Account;<br>4. Self-attested copy of Passport/Aadhaar Card/Electricity Bill/latest bank statement in case there is any change in the address.<br>**Weblink to download the forms :**<br>1. Bank's website at https://karnatakabank.com/investor-portal/shareholder-information<br>2. RTA's website at https://www.integratedindia.in/Corporate_Container.aspx?RTI/STA<br>Kindly note that in the absence of updation of the above details, the concerned folios shall be frozen w.e.f. April 01, 2023. |
| **Demat Holding** | Kindly contact your DP and register the email id and bank account particulars (including 9 digit MICR No., 11 digit IFSC. and Core Banking Account No.) in the demat account. |

**For The Karnataka Bank Ltd.,**
**Prasanna Patil**
**Company Secretary**

**Place : Mangaluru**
**Date : August 03, 2022**

Udayavani -04.08.2022

# ಕರ್ಣಾಟಕ ಬ್ಯಾಂಕ್ ಲಿ.

ನಿಮ್ಮ ಕುಟುಂಬದ ಬ್ಯಾಂಕ್. ಭಾರತದಾದ್ಯಂತ.

ನೋಂದಾಯಿತ ಕಚೇರಿ : ಮಹಾವೀರ ವೃತ್ತ, ಕಂಕನಾಡಿ, ಮಂಗಳೂರು-575 002
ಕಂಪನಿ ಗುರುತು ಸಂಖ್ಯೆ : L85110KA1924PLC001128, ಇ-ಮೇಲ್ : investor.grievance@ktkbank.com
ಕಂಪನಿ ಜಾಲತಾಣ : www.karnatakabank.com, ಫೋನ್ ನಂ. : 0824-2228222

## ಬ್ಯಾಂಕಿನ 98ನೇ ವಾರ್ಷಿಕ ಮಹಾಸಭೆ ಮತ್ತು ವಿದ್ಯುನ್ಮಾನ ಮತದಾನ ಪ್ರಕ್ರಿಯೆಯ ಕುರಿತು

ಈ ಮೂಲಕ ಬ್ಯಾಂಕಿನ ಸದಸ್ಯರುಗಳಿಗೆ ತಿಳಿಯಪಡಿಸುವುದೇನೆಂದರೆ, ಕಂಪನಿ ಕಾಯಿದೆ, 2013 ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ (MCA) ಹೊರಡಿಸಿರುವ ಸುತ್ತೋಲೆ ಸಂಖ್ಯೆ 02/2022 ದಿನಾಂಕ 05.05.2022 ಹಾಗೂ ಸಂಬಂಧಿತ ಸುತ್ತೋಲೆಗಳು ಮತ್ತು ಸೆಬಿ ಹೊರಡಿಸಿರುವ ಸುತ್ತೋಲೆಗಳು ಹಾಗೂ ಅನ್ವಯವಾಗುವ ಇತರ ಕಾನೂನುಗಳ ಅನುಸಾರವಾಗಿ, ಬ್ಯಾಂಕಿನ 98ನೇ ವಾರ್ಷಿಕ ಮಹಾಸಭೆಯು **(AGM) ಆಗಸ್ಟ್ 26, 2022 ಶುಕ್ರವಾರ ಪೂರ್ವಾಹ್ನ 11.30 ಗಂಟೆಗೆ ವಿದ್ಯುನ್ಮಾನ ಮಾಧ್ಯಮ** (VC) ಅಥವಾ ಇತರ ಆಡಿಯೋ ವಿಶ್ಯುವಲ್ ಮಾಧ್ಯಮಗಳ ಮೂಲಕ **(OAVM)** ಜರುಗಲಿದ್ದು , ಬ್ಯಾಂಕಿನ ಸದಸ್ಯರು ವಾರ್ಷಿಕ ಮಹಾಸಭೆಯ ನೋಟೀಸಿನಲ್ಲಿ ನೀಡಿರುವ ಸೂಚನೆಗಳ ಅನುಸಾರ ವಿದ್ಯುನ್ಮಾನ ಮಾಧ್ಯಮದ (VC/OAVM) ಮೂಲಕ ವಾರ್ಷಿಕ ಮಹಾಸಭೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. ಕಂಪನಿ ಕಾಯ್ದೆ 2013, ಸೆಕ್ಷನ್ 103ರ ಪ್ರಕಾರ ವಿದ್ಯುನ್ಮಾನ ಮಾಧ್ಯಮದ ಮೂಲಕ ಭಾಗವಹಿಸುವ ಸದಸ್ಯರನ್ನು ಮಾತ್ರ ಮಹಾಸಭೆಗೆ ಅಗತ್ಯವಿರುವ ಕನಿಷ್ಠ ಹಾಜರಾತಿಗಾಗಿ ಪರಿಗಣಿಸಲಾಗುವುದು.

ಈ ಮೇಲೆ ಹೇಳಿರುವ ಸಂಬಂಧಿತ ಸುತ್ತೋಲೆಗಳಿಗೆ ಅನುಸಾರವಾಗಿ ವಾರ್ಷಿಕ ಮಹಾಸಭೆಯ ನೋಟೀಸು ಮತ್ತು 2021-22ನೇ ಸಾಲಿನ ವಾರ್ಷಿಕ ವರದಿಯನ್ನು ಆಗಸ್ಟ್ 2, 2022 ರಂದು ಬ್ಯಾಂಕಿನ ಸದಸ್ಯರುಗಳಿಗೆ ಇ-ಮೇಲ್ ಮೂಲಕ ಕಳುಹಿಸಲಾಗಿದ್ದು , ಈ ದಾಖಲೆಗಳು ಬ್ಯಾಂಕ್‌ನ ಜಾಲತಾಣ https://karnatakabank.com/investor-portal/annual-report ನಲ್ಲಿ, ಸ್ಟಾಕ್ ಎಕ್ಸ್‌ಚೇಂಜ್‌ಗಳ ಜಾಲತಾಣಗಳಲ್ಲಿ (ಅಂದರೆ www.bseindia.com ಮತ್ತು www.nseindia.com ) ಹಾಗೂ CDSL ನ ಜಾಲತಾಣ www.evotingindia.com ನಲ್ಲೂ ಸಹ ಲಭ್ಯವಿವೆ.

ಕಂಪನಿಗಳ ಕಾಯಿದೆ 2013 ರ ವಿಭಾಗ 108 ರ ಅನುಸಾರವಾಗಿ ಬ್ಯಾಂಕಿನ ವಾರ್ಷಿಕ ಮಹಾಸಭೆಯ ನೋಟೀಸಿನಲ್ಲಿ ಉಲ್ಲೇಖಿಸಿದ ಠರಾವುಗಳಿಗೆ ಬ್ಯಾಂಕಿನ ಸದಸ್ಯರ ಅನುಮೋದನೆಯನ್ನು ವಿದ್ಯುನ್ಮಾನ ಮತದಾನದ (ರಿಮೋಟ್ ಇ-ಮೋಟಿಂಗ್) ಮುಖಾಂತರ ಪಡೆಯಲಾಗುವುದು. ವಿದ್ಯುನ್ಮಾನ ಮತದಾನದ ವಿವರಗಳು ಈ ಕೆಳಗಿನಂತಿವೆ :

| | | |
|---|---|---|
| 1. | ವಿದ್ಯುನ್ಮಾನ ಮತದಾನ ಪ್ರಾರಂಭವಾಗುವ ದಿನಾಂಕ ಮತ್ತು ಸಮಯ | **ಆಗಸ್ಟ್ 22, 2022 ಬೆಳಿಗ್ಗೆ 9.00 ಗಂಟೆ (ಭಾರತೀಯ ಕಾಲಮಾನ)** |
| 2. | ವಿದ್ಯುನ್ಮಾನ ಮತದಾನ ಮುಕ್ತಾಯದ ದಿನಾಂಕ ಮತ್ತು ಸಮಯ | **ಆಗಸ್ಟ್ 25, 2022 ಸಂಜೆ 5.00 ಗಂಟೆ (ಭಾರತೀಯ ಕಾಲಮಾನ)** |
| 3. | ವಿದ್ಯುನ್ಮಾನ ಮತದಾನ ಸೌಲಭ್ಯ ಲಭ್ಯವಿರುವ ಜಾಲತಾಣ | **www.evotingindia.com/https://eservices.nsdl.com** |
| 4. | ನಿಗದಿತ ದಿನಾಂಕ (ವಿದ್ಯುನ್ಮಾನ ಮತದಾನ ಹಾಗೂ ವಾರ್ಷಿಕ ಮಹಾಸಭೆಯಂದು ಮತದಾನ ಮಾಡಲು ಅರ್ಹತೆ ಹೊಂದಿರುವ ಸದಸ್ಯರ ಪಟ್ಟಿಯನ್ನು ನಿರ್ಧರಿಸುವ ದಿನಾಂಕ | **ಆಗಸ್ಟ್ 19, 2022** |

1. ಈ ಮೇಲೆ ಹೇಳಿದ ನಿಗದಿತ ದಿನಾಂಕದಂದು ಬ್ಯಾಂಕಿನ ಷೇರುಗಳನ್ನು ಭೌತಿಕ ಅಥವಾ ಡಿಮ್ಯಾಟ್ ಸ್ವರೂಪದಲ್ಲಿ ಹೊಂದಿರುವ ಸದಸ್ಯರು ವಿದ್ಯುನ್ಮಾನ ಮತದಾನ (ರಿಮೋಟ್ ಇ-ವೋಟಿಂಗ್) ಮತ್ತು ವಾರ್ಷಿಕ ಮಹಾಸಭೆ ಜಾರಿಯಲ್ಲಿರುವ ಸಮಯದಲ್ಲಿನ ವಿದ್ಯುನ್ಮಾನ ಮತದಾನ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಅರ್ಹತೆ ಹೊಂದಿರುತ್ತಾರೆ.
2. ವಿದ್ಯುನ್ಮಾನ ಮತದಾನವು **ಆಗಸ್ಟ್ 25, 2022ರಂದು ಸಂಜೆ 5.00 ಗಂಟೆಗೆ** ನಿಷ್ಕ್ರಿಯಗೊಳ್ಳಲಿದ್ದು, ಆ ಬಳಿಕ ವಿದ್ಯುನ್ಮಾನ ಮತದಾನದ ಸೌಲಭ್ಯ ಲಭ್ಯವಿರುವುದಿಲ್ಲ.
3. ವಾರ್ಷಿಕ ಮಹಾಸಭೆಯಲ್ಲಿ ಪಾಲ್ಗೊಳ್ಳುವ ಸದಸ್ಯರು ಮತ್ತು ವಿದ್ಯುನ್ಮಾನ ಮತದಾನದ (remote e-voting) ಮೂಲಕ ಮತ ಚಲಾಯಿಸಿರದ ಸದಸ್ಯರುಗಳಿಗೆ ಮಾತ್ರ ಮಹಾಸಭೆ ಜಾರಿಯಲ್ಲಿರುವ ಅವಧಿಯಲ್ಲಿ ವಿದ್ಯುನ್ಮಾನ ಮತದಾನದ ಅವಕಾಶ ನೀಡಲಾಗುವುದು.
4. ವಿದ್ಯುನ್ಮಾನ ಮತದಾನದ (remote e-voting) ಮೂಲಕ ಮತ ಚಲಾಯಿಸಿರುವ ಸದಸ್ಯರಿಗೆ ವಾರ್ಷಿಕ ಮಹಾಸಭೆಯಲ್ಲಿ ಪಾಲ್ಗೊಳ್ಳುವ ಅವಕಾಶವಿದ್ದರೂ, ಮಹಾಸಭೆ ಜಾರಿಯಲ್ಲಿರುವ ಅವಧಿಯಲ್ಲಿ ಮತ ಚಲಾಯಿಸಲು ಯಾವುದೇ ಅವಕಾಶವಿರುವುದಿಲ್ಲ.
5. ಮಹಾಸಭೆಯ ನೋಟೀಸ್ ರವಾನಿಸಿದ ನಂತರದಲ್ಲಿ ಬ್ಯಾಂಕಿನ ಷೇರುದಾರರಾಗಿರುವ ಹಾಗೂ ನಿಗದಿತ ದಿನಾಂಕದಂದು ಷೇರು ಹೊಂದಿರುವ ಸದಸ್ಯರು ಲಾಗಿನ್‌ಗಾಗಿ ಬ್ಯಾಂಕಿನ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟ್‌ರನ್ನು (RTA) irg@integratedindia.in ಗೆ ಇ-ಮೇಲ್ ಮುಖಾಂತರ ಸಂಪರ್ಕಿಸಬಹುದಾಗಿದೆ. CDSL/NSDLನ ವಿದ್ಯುನ್ಮಾನ ಮತದಾನದ ಪೋರ್ಟಲ್‌ನಲ್ಲಿ ಈಗಾಗಲೇ ನೋಂದಾಯಿಸಿರುವ ಸದಸ್ಯರು ತಾವು ಹೊಂದಿರುವ Login ID ಮತ್ತು password ಬಳಸಿ ವಿದ್ಯುನ್ಮಾನ ಮತದಾನ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದಾಗಿದೆ.
6. ವಿದ್ಯುನ್ಮಾನ ಮತದಾನದ ನಿಯಮಗಳು ಮತ್ತು ಇತರ ವಿವರಗಳನ್ನು ವಾರ್ಷಿಕ ಮಹಾಸಭೆಯ ನೋಟೀಸಿನಲ್ಲಿ ಕೊಡಲಾಗಿದೆ.
7. ಲಾಭಾಂಶದ ಮೇಲೆ ಅನ್ವಯವಾಗುವ ತೆರಿಗೆಯ **(TDS on Dividend)** ಬಗ್ಗೆ : ನಿರ್ದೇಶಕರ ಮಂಡಳಿಯು 2021-22ನೇ ಹಣಕಾಸು ವರ್ಷಕ್ಕೆ ಸಂಬಂಧಿಸಿದಂತೆ ಪ್ರತಿ ಷೇರಿಗೆ ರೂ. 4/- ರಂತೆ ಲಾಭಾಂಶವನ್ನು ಶಿಫಾರಸು ಮಾಡಿದ್ದು (ಸದಸ್ಯರ ಅನುಮೋದನೆಗೆ ಒಳಪಟ್ಟು) ಆದಾಯ ತೆರಿಗೆ ಕಾಯಿದೆ, 1961ರ ಪ್ರಕಾರ (2020 ರ ತಿದ್ದುಪಡಿಯಂತೆ), ಲಾಭಾಂಶದ ಪಾವತಿಯ ಸಂದರ್ಭದಲ್ಲಿ ತೆರಿಗೆಯನ್ನು ನಿಗದಿತ ದರದಲ್ಲಿ ಮೂಲದಲ್ಲಿಯೇ ಕಡಿತ(TDS)ಗೊಳಿಸುವುದು ಕಡ್ಡಾಯವಾಗಿರುತ್ತದೆ. ಈ ವಿಷಯವಾಗಿ ಹೆಚ್ಚಿನ ಮಾಹಿತಿಗಾಗಿ ಬ್ಯಾಂಕಿನ ಜಾಲತಾಣ https://karnatakabank.com/investor-portal/annual-report ನಲ್ಲಿ ಅಥವಾ ವಾರ್ಷಿಕ ಮಹಾಸಭೆಯ ನೋಟೀಸಿನಲ್ಲಿ ನೀಡಿರುವ ವಿವರಗಳನ್ನು ಷೇರುದಾರರು ಪರಿಶೀಲಿಸಬಹುದು. ಈ ನಿಟ್ಟಿನಲ್ಲಿ ಸೂಕ್ತವಾದ TDSನ ದರವನ್ನು ನಿಗದಿಪಡಿಸುವ ಸಲುವಾಗಿ ಆದಾಯ ತೆರಿಗೆ ಕಾಯಿದೆಯ ನಿಬಂಧನೆಗಳಿಗನುಗುಣವಾಗಿ ಸಂಬಂಧಿತ ದಾಖಲೆಗಳನ್ನು ನೀಡಲು ಬಯಸುವ ಷೇರುದಾರರು ಬ್ಯಾಂಕಿನ RTAನ ಜಾಲತಾಣ https://www.integratedindia.in/ExemptionFormSubmission.aspx ನಲ್ಲಿ ದಿನಾಂಕ **ಆಗಸ್ಟ್ 21, 2022 ರ 11.59 pm** ನ ಒಳಗಾಗಿ ಸಲ್ಲಿಸಬೇಕಾಗಿ ಕೋರುತ್ತೇವೆ. ಈ ಸಂಬಂಧ ಇತರ ಯಾವುದೇ ವಿಧಾನಗಳ ಮೂಲಕ ಅಥವಾ ಮೇಲೆ ಹೇಳಿದ ದಿನಾಂಕ ಮತ್ತು ಸಮಯದ ನಂತರ ಸಲ್ಲಿಸಿದ ಯಾವುದೇ ದಾಖಲೆಗಳನ್ನು ಪರಿಗಣಿಸಲಾಗುವುದಿಲ್ಲ.
8. ಇ-ಮೇಲ್ ಮತ್ತು ಮೊಬೈಲ್ ಸಂಖ್ಯೆಗಳ ನೋಂದಣಿ /PAN/KYC/ ಬ್ಯಾಂಕ್ ಖಾತೆ ವಿವರಗಳನ್ನು ನವೀಕರಿಸಲು ಅನುಸರಿಸಬೇಕಾದ ವಿಧಾನ :

| | |
|---|---|
| ಭೌತಿಕ ರೂಪದಲ್ಲಿ ಇರುವ ಷೇರುಗಳಿಗಾಗಿ (Physical form) | SEBI ಸುತ್ತೋಲೆ ಸಂಖ್ಯೆSEBI/HO/ MIRSD/MIRSD_RTAMB/P/CIR/2021/655 ದಿನಾಂಕ ನವೆಂಬರ್ 3, 2021 ರ ಪ್ರಕಾರ ಬ್ಯಾಂಕಿನ ಷೇರುಗಳನ್ನು ಭೌತಿಕ ರೂಪದಲ್ಲಿ ಹೊಂದಿರುವ ಷೇರುದಾರರು PAN, KYC ಮತ್ತು ನಾಮನಿರ್ದೇಶನದ (Nomination) ವಿವರಗಳನ್ನು RTA ಗೆ ಒದಗಿಸುವುದು ಕಡ್ಡಾಯವಾಗಿರುತ್ತದೆ. ಅಂತೆಯೇ ಲಾಭಾಂಶವನ್ನು ಬ್ಯಾಂಕ್ ಖಾತೆಯಲ್ಲಿ ನೇರವಾಗಿ ಪಡೆಯಲು ವಿವರಗಳನ್ನು ಬ್ಯಾಂಕಿನ RTAರಲ್ಲಿ ನೋಂದಾಯಿಸಬೇಕಾಗಿ ವಿನಂತಿ. ಆದ್ದರಿಂದ, ಎಲ್ಲಾ ಅಗತ್ಯ ವಿವರಗಳನ್ನು ನವೀಕರಿಸಲು, ಈ ಕೆಳಗಿನ ದಾಖಲೆಗಳನ್ನು ಬ್ಯಾಂಕ್/RTAಗೆ ಸಲ್ಲಿಸಬೇಕಾಗಿ ಕೋರಲಾಗಿದೆ.<br>1. ನಮೂನೆ ISR-1, ISR2, SH-13 (Nomination Form);<br>2. ಸ್ವಯಂ-ದೃಢೀಕರಿಸಿದ ಪ್ಯಾನ್ ಕಾರ್ಡ್‌ನ ಪ್ರತಿ,<br>3. ಬ್ಯಾಂಕ್ ಖಾತೆಯ ವಿವರಗಳು (Cancelled Cheque Leaf),<br>4. ವಿಳಾಸದ ದೃಢೀಕರಣಕ್ಕಾಗಿ ಪಾಸ್‌ಪೋರ್ಟ್ / ಆಧಾರ್ ಕಾರ್ಡ್/ ವಿದ್ಯುತ್ ಬಿಲ್ / ಇತ್ತೀಚಿನ ಬ್ಯಾಂಕ್ ಸ್ಟೇಟ್‌ಮೆಂಟ್‌ನ ಸ್ವಯಂ-ದೃಢೀಕರಿಸಿದ ಪ್ರತಿ.<br>ಈ ಮೇಲೆ ಉಲ್ಲೇಖಿಸಿದ ನಮೂನೆಗಳು ದೊರೆಯುವ ವೆಬ್‌ಲಿಂಕ್:<br>1. ಬ್ಯಾಂಕಿನ ಜಾಲತಾಣ : https://karnatakabank.com/investor-portal/shareholder-information<br>2. RTAನ ಜಾಲತಾಣ : https://www.integratedindia.in/Corporate_Container.aspx?RTI/STA<br>ಸೆಬಿ ನಿಯಮಾನುಸಾರ ದಿನಾಂಕ 01.04.2023ಗೆ ಮುಂಚಿತವಾಗಿ, PAN, KYC ಮುಂತಾದ ವಿವರಗಳು ನವೀಕರಣವಾಗದಿರುವ ಫೋಲಿಯೊಗಳು ನಿರ್ಬಂಧಕ್ಕೆ ಒಳಗಾಗಲಿವೆ (freeze) ಎಂಬುದನ್ನು ಷೇರುದಾರರು ಗಮನಿಸಬೇಕಾಗಿ ವಿನಂತಿ. |
| ಡಿಮ್ಯಾಟ್ ರೂಪದಲ್ಲಿ ಹೊಂದಿರುವ ಷೇರುಗಳಿಗಾಗಿ | ಇ-ಮೇಲ್ ವಿಳಾಸ ಮತ್ತು ಬ್ಯಾಂಕ್ ಖಾತೆಯ ವಿವರಗಳನ್ನು (9 ಅಂಕಿಗಳ MICRಸಂಖ್ಯೆ, 11 ಅಂಕಿಗಳ IFSC ಸಂಖ್ಯೆ ಮತ್ತು ಕೋರ್ ಬ್ಯಾಂಕಿಂಗ್ ಖಾತೆ ಸಂಖ್ಯೆ ಸೇರಿದಂತೆ) ವಿವರಗಳನ್ನು ನೋಂದಾಯಿಸಲು ಸಂಬಂಧಿತ ಡಿಪಾಸಿಟರಿ ಪಾರ್ಟಿಸಿಪೆಂಟ್ (DP)ನ್ನು ಸಂಪರ್ಕಿಸಲು ಕೋರಲಾಗಿದೆ. |

**ಕರ್ಣಾಟಕ ಬ್ಯಾಂಕ್ ಲಿಮಿಟೆಡ್ ಪರವಾಗಿ,**
**ಪ್ರಸನ್ನ ಪಾಟೀಲ್**
**ಕಂಪನಿ ಕಾರ್ಯದರ್ಶಿ**

**ಸ್ಥಳ : ಮಂಗಳೂರು**
**ದಿನಾಂಕ : ಆಗಸ್ಟ್ 3, 2022**